ಭೋವಿ ಜಾತಿಯ ದೃಢೀಕರಣ ಪತ್ರ

80 (71)

ಶ್ರೀ ಕುಮಾರಸ್ವಾಮಿ ಕೆ.ಜಿ. (ಶಿವಮೊಗ್ಗ ಗ್ರಾಮಾಂತರ)

ಅ) ದಿ:20.01.2013 ರಂದು ನವಲಗುಂದದಲ್ಲಿ ನಡೆದ ರಾಜ್ಯ ಮಟ್ಟದ ಮಹಾಸಮ್ಮೇಳನದಲ್ಲಿ ರಾಜ್ಯದಲ್ಲಿ ವಾಸಿಸುವ ಸುಮಾರು 16 ಲಕ್ಷ ಜನಸಂಖ್ಯೆ ಹೊಂದಿರುವ ಮೂಲ ಭೋವಿ ಜನಾಂಗ ವಡ್ಡರು ಅಲ್ಲದೇ ಇರುವ ಬೆಂಗಳೂರು ಸಮುದಾಯದ ಧಾರ್ಮಿಕ ಪೀಠಸ್ಥಾಪನೆ, ಶೈಕ್ಷಣಿಕ, ಸಾಮಾಜಿಕ ಚಟುವಟಿಕೆ ನಡೆಸಲು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಸುಮಾರು 10 ಎಕರೆ ಸರ್ಕಾರಿ ಜಮೀನನ್ನು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಜಮೀನನ್ನು ಗುರುತಿಸಿ ಸರ್ಕಾರಕ್ಕೆ ವರದಿ ಮಾಡಲು ಬಿಡಿಎ ಅಧಿಕಾರಿಗೆ ನಗರ ಜಿಲ್ಲಾಧಿಕಾರಿಗೆ ಆಡಳಿತಾತ್ಮಕ ಸೂಚನೆ ನೀಡಲಾಗಿದೆಯೇ; (ವಿವರ ನೀಡುವುದು)

ಇ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಇವರು ಕ್ರಮಾಂಕ ಸಕಇ 154 ಎಸ್‌ಎಡಿ 2002 ದಿ:14.11.2002ರಲ್ಲಿ ಜಿಲ್ಲಾಧಿಕಾರಿ, ಧಾರವಾಡ ಮತ್ತು ತಹಶೀಲ್ದಾರ್ ನವಲಗುಂದ ಇವರಿಗೆ ಸ್ಪಷ್ಟ ನಿರ್ದೇಶನ ನೀಡಿ ಭೋವಿ ಜಾತಿ ದೃಢೀಕರಣ ಪತ್ರ ನೀಡುವ ಬಗ್ಗೆ ತಿಳಿಸಿದ್ದರೂ ಕೆಲವು ತಹಶೀಲ್ದಾರ್‌ರು ತಪ್ಪಾಗಿ ಅರ್ಥೈಸಿಕೊಂಡು ಮೂಲಭೋವಿ ಜಾತಿ ಅಭ್ಯರ್ಥಿಗಳಿಗೆ ದೃಢೀಕರಣ ಪತ್ರ ನಿರಾಕರಿಸುತ್ತಿರುವುದು ಹಾಗೂ ಈ ಅಂಶಗಳನ್ನು ಉಲ್ಲೇಖಿಸಿ ಶಾಸಕರು ಮತ್ತು ಅಖಿಲ ಕರ್ನಾಟಕ ಭೋವಿ ವಿವಿಧೋದ್ದೇಶ ಸೇವಾ ಸಂಘ ಗುಲ್ಬರ್ಗಾ ಇದರ ರಾಜಾಧ್ಯಕ್ಷರು ರಾಜ್ಯದ ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳಿಗೂ ಮನವಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಬಗ್ಗೆ ತೆಗೆದುಕೊಂಡ ಕ್ರಮದ ಕ್ರಮಗಳೇನು?

ಶ್ರೀ ಎ.ನಾರಾಯಣ ಸ್ವಾಮಿ. (ಸಮಾಜ ಕಲ್ಯಾಣ, ಬಂಧೀಖಾನೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಇದರ ಬಗ್ಗೆ ಸರ್ಕಾರದ ಗಮನಕ್ಕೆ ವಿಷಯ ಬಂದಿರುವುದಿಲ್ಲ.

ಗೃಹ ಮಂಡಳಿಯಲ್ಲಿ ನಿವೇಶನ/ಮನೆ ಹಂಚಿಕೆ

111 (189)

ಶ್ರೀ ಸುನೀಲ್ ವಿ.ಹೆಗಡೆ.(ಹಳಿಯಾಳ)

ಅ) ಕರ್ನಾಟಕ ಗೃಹ ಮಂಡಳಿಯವರು ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದಲ್ಲಿ ಮನೆಗಳ ಹಂಚಿಕೆಗಾಗಿ ಅರ್ಜಿಗಳನ್ನು ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಷ್ಟು ಅರ್ಜಿಗಳನ್ನು ಪಡೆಯಲಾಗಿದೆ;

ಇ) ವಸತಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು; ಹಾಗೂ ಎಷ್ಟು ಮನೆ/ನಿವೇಶನ ನೀಡಲು ಗುರಿ ಹೊಂದಲಾಗಿದೆ;

ಈ) ಈಗಾಗಲೇ ಅರ್ಜಿಗಳನ್ನು ಸಲ್ಲಿಸಿರುವವರಿಗೆ ನಿವೇಶನ/ಮನೆಗಳನ್ನು ಯಾವ ಕಾಲ ಮಿತಿಯಲ್ಲಿ ಹಂಚಿಕೆ ಮಾಡಲಾಗುತ್ತದೆ? (ಪೂರ್ಣ ವಿವರ ನೀಡುವುದು)

ಶ್ರೀ ವಿ.ಸೋಮಣ್ಣ (ಮಾನ್ಯ ವಸತಿ ಸಚಿವರು)

ಅ) ಬಂದಿದೆ.

ಆ) 2009 ರಲ್ಲಿ ಕೈಗೊಂಡ ಬೇಡಿಕೆ ಸಮೀಕ್ಷೆಯಲ್ಲಿ ನಿವೇಶನ/ಮನೆ ಕೋರಿ ಒಟ್ಟು 1769 ಅರ್ಜಿಗಳನ್ನು ಸ್ವೀಕರಿಸಲಾಗಿದೆ.

ಇ) ಹಳಿಯಾಳ ತಾ//ಅಲಸಿ ಗ್ರಾಮದಲ್ಲಿ ಒಟ್ಟು 25.02ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿ: 16.09.2010ರಂದು ಪ್ರಕಟಿಸಲಾಗಿತ್ತು. ಆದರೆ ಸದರಿ ಗ್ರಾಮದ ಭೂಮಾಲೀಕರಿಂದ ತೀವ್ರ ವಿರೋಧ ವ್ಯಕ್ತವಾದ ಕಾರಣ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲಾಗಿದೆ. ಹಳಿಯಾಳ ಪಟ್ಟಣದಲ್ಲಿ ವಸತಿ ಯೋಜನೆಗಾಗಿ ಬೇರೆ ಜಮೀನನ್ನು ಸಂಗ್ರಹಿಸಲು ಪರಿಶೀಲಿಸಲಾಗುತ್ತಿದೆ.